# 4. ವಚನಗಳು


**ಕವಿ ಪರಿಚಯ :** ಬಸವಣ್ಣನವರು 12ನೇ ಶತಮಾನದಲ್ಲಿ ಆಗಿ ಹೋದ ಸಮಾಜ ಸುಧಾರಕರು. ಇವರು ಹುಟ್ಟೂರು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ. ಮಾದರಸ ಮಾದಲಾಂಬಿಕೆಯರು ಇವರ ಮಾತಾಪಿತೃಗಳು. ಇವರು ಮಲಾಪಹಾರಿ ಮತ್ತು ಕೃಷ್ಣಾ ನದಿಗಳ ಸಂಗಮ ಸ್ಥಳವಾದ 'ಕಪ್ಪಡಿ ಸಂಗಮ' ಎಂಬ ಸ್ಥಳದಲ್ಲಿದ್ದ ಜಾತವೇದ ಮುನಿಗಳೆಂಬವರಲ್ಲಿ ವಿದ್ಯಾಭ್ಯಾಸ ಮಾಡಿ ಪ್ರೌಢ ವಯಸ್ಸಿನಲ್ಲಿ ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಲಚೂರ್ಯ ಬಿಜ್ಜಳನ ಕರಣಿಕರಾಗಿ, ಮಂತ್ರಿಯಾಗಿ ಕೆಲಸ ಮಾಡಿದರೆಂದು ತಿಳಿದುಬರುವುದು. ಕೂಡಲಸಂಗಮದೇವ ಎಂಬ ಅಂಕಿತನಾಮದಿಂದ ಕನ್ನಡದಲ್ಲಿ ಅಸಂಖ್ಯಾತ ವಚನಗಳನ್ನು ರಚಿಸಿದ್ದಾರೆ.

ಈ ವಚನಗಳಲ್ಲಿ ಆತ್ಮ ಶುದ್ಧಿ, ದೇಹಶುದ್ಧಿ, ವಾಕ್‌ಶುದ್ಧಿ ವಿನಯಗುಣ, ಬೇಡದಿರುವಿಕೆ ಮುಂತಾದ ಗುಣಗಳು ಮನುಷ್ಯನ ಉದ್ಧಾರಕ್ಕೆ ಆವಶ್ಯಕ ಎಂಬ ಅಂಶ ವ್ಯಕ್ತವಾಗುತ್ತದೆ.

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ
ಘೋರ ತಪವ ಮಾಡಿದೊಡೇನು? ಅಂತರಂಗ ಆತ್ಮಶುದ್ಧಿ
ಯಿಲ್ಲದವರನೆಂತು ನಂಬುವನಯ್ಯ ಕೂಡಲ ಸಂಗಮದೇವ? ॥ 1 ॥

ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡಲಿ?
ಬಡವನಯ್ಯ! ಎನ್ನ ಕಾಲೇಕಂಬ ದೇಹವೇ ದೇಗುಲ;
ಶಿರವೇ ಹೊನ್ನ ಕಲಶವಯ್ಯ ಕೂಡಲ ಸಂಗಮದೇವ ಕೇಳಯ್ಯ!
ಸ್ಥಾವರಕ್ಕಳಿವುಂಟು; ಜಂಗಮಕ್ಕಳಿವಿಲ್ಲ. ॥ 2 ॥

ಕಂಡಭಕ್ತರಿಗೆ ಕೈಮುಗಿಯುವಾತನೇ ಭಕ್ತ
ಮೃದು ವಚನವೇ ಸಕಲ ಜಪಂಗಳಯ್ಯ,
ಸದುವಿನಯವೇ ಸದಾಶಿವನ ಒಲುಮೆಯಯ್ಯ
ಕೂಡಲಸಂಗಮದೇವ ನಂತಲ್ಲ ದೊಲ್ಲನಯ್ಯ ॥ 3 ॥



''ಏನು ಬಂದಿರಿ ಹದುಳವಿದ್ದಿರೆ'' ''ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ?
''ಕುಳ್ಳಿರಿ'' ಎಂದರೆ ನೆಲಕುಳಿ ಹೋಹುದೆ?
ಒಡನೆ ನುಡಿದರೆ ಶಿರ ಹೊಟ್ಟೆಯೊಡೆಯುವುದೆ?
ಕೊಡಲಿಲ್ಲದಿದ್ದ ರೊಂದು ಗುಣವಿಲ್ಲದಿರ್ದೊಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವನು? ॥4॥

ಸುರರ ಬೇಡಿದಡಿಲ್ಲ; ನರರ ಬೇಡಿದೊಡಿಲ್ಲ
ಬರಿದೆ ಧೃತಿಗೆಡಬೇಡ ಮನವೇ;
ಆರನಾದಡೆಯು ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೇ
ಕೂಡಲ ಸಂಗಮದೇವನ್ನಲ್ಲದೆ ಆರ ಬೇಡಿದಡಿಲ್ಲ ಮನವೇ. ॥ 5 ॥

## ಶಬ್ದಗಳ ಅರ್ಥ

ಘೋರ-ಬಯಂಕರ; ಶಿರ-ತಲೆ; ಸ್ಥಾವರ-ಸ್ಥಿರವಾದುದು; ಜಂಗಮ- ಚಲನೆಯುಳ್ಳದ್ದು; ಹದುಳ- ಕ್ಷೇಮ, ಸೌಖ್ಯ

## ಅಭ್ಯಾಸ

**ಕೃತಿ 1) ಒಂದೇ ವಾಕ್ಯದಲ್ಲಿ ಉತ್ತರಿಸಿರಿ**


1) ದೇವರು ಎಂಥವರನ್ನು ನಂಬುವುದಿಲ್ಲ?

2) ಯಾರಿಗೆ ಅಳಿವಿಲ್ಲ?

3) ಭಕ್ತನ ನಡೆನುಡಿಗಳು ಹೇಗಿರಬೇಕೆಂದು ಬಸವಣ್ಣನವರು ಹೇಳುತ್ತಾರೆ?

4) ಬಸವಣ್ಣನವರ ವಚನಗಳ ಅಂಕಿತನಾಮ ಯಾವುದು?

**ಕೃತಿ 2) ಈ ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 3) ಅನುಕ್ರಮವಾಗಿ ಬರೆಯಿರಿ.**

1) ಆರನಾದಡೆಯು ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೇ.
2) ಒಡನೆ ನುಡಿದರೆ ಶಿರ ಹೊಟ್ಟೆಯೊಡೆಯುವುದೆ?
3) ಮೃದು ವಚನವೇ ಸಕಲ ಜಪಂಗಳಯ್ಯ.
4) ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ.

**ಕೃತಿ 4) ಗುಂಪಿಗೆ ಸೇರದ ಪದ ತೆಗೆಯಿರಿ.**

1) ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಚನ್ನ ಬಸವಣ್ಣ
2) ವಚನ, ಕವಿತೆ, ರಗಳೆ, ಕಾದಂಬರಿ,
3) ಕಾಲು, ಶಿರ, ದೇಹ, ಕಂಬ
4) ಶಿವಾಲಯ, ದೇವಾಲಯ, ಮಂದಿರ, ಮನೆ

**ಕೃತಿ 5) ಒಂದು ಮತ್ತು ಎರಡನೆಯ ವಚನಗಳ ಸಾರಾಂಶವನ್ನು ನಿನ್ನ ಮಾತುಗಳಲ್ಲಿ ಬರೆಯಿರಿ.**

**ಕೃತಿ 6) ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ.**

ಭಕ್ತರಿಗೆ, ವಚನವೇ, ಶಿವನ, ಮನೆಯಲ್ಲಿ

93A4CT

***